**<u>ಸಾಕ್ಷಿಯನ್ನು ದಿನಾಂಕಃ 27.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಮ್ ಎಸ್ ಎನ್ ವಕೀಲರಿಂದಃ</u>**

ಆರೋಪಿಗೆ ನಾನು ನಾಗನಹಳ್ಳಿ ಹಾಗೂ ಅಂಗನವಾಡಿಯ ವಿಳಾಸಕ್ಕೆ ನೋಟಸ್ ಕಳುಹಿಸಿದ್ದು ಅದರಲ್ಲಿ ಯಾವ ವಿಳಾಸಕ್ಕೆ ಜಾರಿಯಾಗಿದೆ ಎಂಬುದನ್ನು ತಿಳಿಸಿರುವುದಿಲ್ಲ. ಆರೋಪಿಯ ಅಂಗನವಾಡಿ ವಿಳಾಸಕ್ಕೆ ನೋಟಿಸ್ ಕಳುಹಿಸಿದ ನಂತರ ಈ ಪ್ರಕರಣ ಹೂಡಿರುತ್ತೇನೆ. ಆ ರೀತಿ ಆರೋಪಿಯ ಅಂಗನವಾಡಿ ವಿಳಾಸಕ್ಕೆ ಕಳುಹಿಸಿದ ನೋಟಿಸ್ ನ ಪ್ರತಿ ಹಾಗೂ ಅದು ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಿಪಿ-6(ಎ) ರಲ್ಲಿ ಆರೋಪಿಯ ನಾಗನಹಳ್ಳಿ ವಿಳಾಸ ಮಾತ್ರ ಇರುತ್ತದೆ ಎಂದರೆ ಸರಿ. ಚೆಕ್ ನಲ್ಲಿ ಇರುವ ಆರೋಪಿಯ ಸಹಿ ಹಾಗೂ ಅದರಲ್ಲಿ ಇರುವ ಇತರ ಬರವಣಿಗೆ ಬೇರೆ ಬೇರೆ ಶಾಹಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಚೆಕ್ ಅನ್ನು ನಾನೇ ಬರೆದಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಯಾವುದೇ ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ಆರೋಪಿಗೆ ಚೆಕ್ ಮೂಲಕ ಸಾಲವನ್ನು ನೀಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ನಾನು ಜಮೀನಿನಲ್ಲಿ ಬೆಳೆದ ಶುಂಠಿ ಬೆಳೆ ಮಾರಿದ ಹಣ ಮನೆಯಲ್ಲೇ ಇದ್ದಿದ್ದು ಅದರಿಂದ ಆರೋಪಿಗೆ ಸಾಲದ ಹಣವನ್ನು ನೀಡಿಡಿರುತ್ತೇನೆಂದು ನುಡಿಯುತ್ತಾರೆ. ನಾನು 2024 ನೇ ಇಸವಿಯಲ್ಲಿ ಶುಂಠ ಬೆಳೆದಿರುತ್ತೇನೆ. ಸಾಕ್ಷಿ ಮುಂದುವರೆದು ಕಳೆದ 4-5 ವರ್ಷಗಳಿಂದಲೂ ಶುಂಠಿ ಬೆಳೆಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಶುಂಠಿ ಬೆಳೆ ಹಾಕಿದ ಸುಮಾರು 6 ತಿಂಗಳಿಗೆ ಅದರ ಫಸಲು ಬರುತ್ತದೆ. ಆ ರೀತಿ ಶುಂಠಿ ಮಾರಾಟ ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಆರೋಪಿಗೆ ಆ ರೀತಿ 2023 ರಲ್ಲಿ ಯಾವುದೇ ಕೈ ಸಾಲ ಇರಲಿಲ್ಲ ಹಾಗೂ ಮನೆ ಕಟ್ಟಿರಲಿಲ್ಲ ಎಂದರೆ ಸಾಕ್ಷಿಯು ಆರೋಪಿ ಆ ರೀತಿ ಹೇಳಿ ಸಾಲ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಯಾರಲ್ಲಿ ಕೈ ಸಾಲ ಮಾಡಿರುವುದಾಗಿ ನನ್ನ ಬಳಿ ಹೇಳಿರುವುದಿಲ್ಲ. ನನ್ನ ಹೆಂಡತಿ ಬಳಿಯೂ ಸಹ ಆರೋಪಿ ಯಾರಿಂದ ಕೈ ಸಾಲ ಪಡೆದಿರುತ್ತಾರೆಂದು ತಿಳಿಸಿರುವುದಿಲ್ಲ.

ಹುಚ್ಚಯ್ಯ ಹಾಗೂ ನಾನು ಸ್ನೇಹಿತರಾಗಿದ್ದು ಆರೋಪಿಯು ಅವರಿಗೆ ಪರಿಚಯ ಇರುವ ಶಿವರಾಜ ಎನ್ನುವವರು ಹುಚ್ಚಯ್ಯನ ಬಳಿ ಸಾಲ ಪಡೆದಾಗ ಆರೋಪಿಯು ಸದರಿ ಸಾಲಕ್ಕೆ ಜಾಮೀನುದಾರಾಗಿ ಅವರ ನಿಪಿ-1 ರ ಸಹಿ ಮಾಡಿದ ಖಾಲಿ ಚೆಕ್ ಅನ್ನು ನೀಡಿದ್ದು ಸದರಿ ಹುಚ್ಚಯ್ಯ ಆ ಚೆಕ್ ಅನ್ನು ನನಗೆ ನೀಡಿ ನನ್ನ

ಮೂಲಕ ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದವರೆದು ನನಗೆ ಹುಚ್ಚಯ್ಯ ಎಂಬುವವರು ಯಾರೂ ಎಂಬುದೇ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನೋಟಿಸ್ ಅನ್ನು ನೀಡಿದ ನಂತರ ಆರೋಪಿಯು ನನ್ನನ್ನು ಭೇಟಿಯಾಗಿ ತನ್ನ ಹಾಗೂ ನಿಮ್ಮ ನಡುವೆ ಯಾವುದೇ ವ್ಯವಹಾರ ಆಗದೇ ಇದ್ದರೂ ಹೇಗೆ ಚೆಕ್ ಅನ್ನು ಹಾಕಿದ್ದೀರಿ ಎಂದು ಕೇಳಿದ್ದು ಆಗ ನಾನು ಸದರಿ ಚೆಕ್ ನ ಮೇಲೆ ಮುಂದುವರೆಯುವುದಿಲ್ಲ ಕೂತು ಬಗೆಹರಿಸಿಕೊಳ್ಳೋಣ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಈ ಬಗ್ಗೆ ಆರೋಪಿಯು ಹೆಚ್ ಡಿ ಕೋಟೆ ಪೋಲಿಸ್ ಠಾಣೆಗೆ ದೂರನ್ನು ನೀಡಲು ಹೋದಾಗ ನಾನು ಆರೋಪಿಯಲ್ಲಿ ಕುಂತು ಬಗೆಹರಿಸಿಕೊಳ್ಳೋಣ ದೂರು ನೀಡಬೇಡಿ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಆರೋಪಿಗೆ ರೂ.2,50,000/- ಸಾಲ ನೀಡಿರುವುದಿಲ್ಲ ಹಾಗೂ ಅಷ್ಟು ಸಾಲವನ್ನು ನೀಡುವಷ್ಟು ನನಗೆ ಆರ್ಥಿಕ ಸಾಮರ್ಥ್ಯವೂ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಾಗೂ ಅವರ ಗಂಡ ಸುಮಾರು ಹಸುಗಳನ್ನು ಸಾಕಿಕೊಂಡು ದಿನಕ್ಕೆ 30-40 ಲೀಟರ್ ಹಾಲು ಮಾರಾಟ ಮಾಡಿ ಅದರಿಂದ ಆದಾಯ ಗಳಿಸಿ ಆರ್ಥಿಕವಾಗಿ ಸ್ಥಿತಿಗತರಾಗಿದ್ದು ನನ್ನಲ್ಲಿ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಮೇಲೆ ಹೇಳಿದ ಹುಚ್ಚಯ್ಯ ಶಾಮಿಲಾಗಿ ಸುಳ್ಳು ಪ್ರಕರಣವನ್ನು ಹೂಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**